★★★

ಅಲ್ಲಿಂದಾಚೆಗೆ ಮೃತ್ಯುವನ್ನು ಕುರಿತಾದಂತೆ ಯಾವ ಸುದ್ದಿಗಳೂ ಅವ್ವ, ಮಗಳಿಗೆ ಸಿಕ್ಕಿರಲಿಲ್ಲ. ನಗರಕ್ಕೆ ಹೋಗಿಬರುತ್ತಿದ್ದ ಅವರಿವರು, "ಅಲ್ಲಿ ಕಂಡಂಗಾಯ್ತು ಇಲ್ಲಿ ನೋಡಿದಂಗಾಯ್ತು" ಎಂಬ ಕಾಲ್ಪನಿಕವಾದ ಸುದ್ದಿಗಳನ್ನೇ ತರುತ್ತಿದ್ದದ್ದು. ಅವೆಲ್ಲ ಬಾಯತೀಟೆಗಾಗಿ ಎಂಬುದು ಅವರಿಗೆ ಗೊತ್ತು. ಕಾದು ಸುಸ್ತಾಗಿ ಕಲ್ಲಿನಂತಾಗಿದ್ದ ಪಾರೋತವ್ವ ತಮ್ಮನ ಮೇಲಿನ ಆಸೆಯನ್ನೇ ಬಿಟ್ಟುಕೊಟ್ಟಂತೆ ಇದ್ದು ಬಿಟ್ಟಿದ್ದಳು. ತಮ್ಮನಿಗಾಗಿ ತಾನು ಪಟ್ಟ ಪಡಿಪಾಟಲುಗಳ ಒಮ್ಮೊಮ್ಮೆ ನೆನೆಯುವಳು. ಈಗೀಗ ಅದನ್ನೂ ಬಿಟ್ಟುಕೊಟ್ಟಂತೆ ಇರತೊಡಗಿದ್ದಳು. ನಾಲ್ಕು ಅಕ್ಷರ ಬಲ್ಲ ಗೌರಿಗೆ ಮೃತ್ಯುವನ್ನು ಹುಡುಕಿಸುವ ದಾರಿ ಗೊತ್ತಿತ್ತು. ಬೇಡವೆಂದು, ಒಂದೂ ಮಾತಿಲ್ಲದೆ ಸಂಬಂಧ ಹರಿದುಕೊಂಡು ಹೋದವನಿಗಾಗಿ ಹುಡುಕಾಟವಾದರೂ ಯಾಕೆಂಬ ಪ್ರಶ್ನೆಗೆ ಉತ್ತರ ಸಿಗದೆ ಘನವಾಗಿ ತನ್ನ ಬದುಕು ಸಾಗಿಸುವುದರಲ್ಲಿ ಮಗ್ನಳಾಗಿ ಬಿಟ್ಟಿದ್ದಳು.

ಗೌರಿಗೀಗ ದುಡಿತವೇ ಚೈತನ್ಯ. ಪಾಲಿಗೆ ಬಂದಿದ್ದ ಎರಡು ಹಸುಗಳೀಗ ಹತ್ತಾಗಿದ್ದವು. ಎರಡೆಕರೆ ಹೊಲದಲ್ಲಿ ಬರೇ ಹುಲ್ಲನ್ನು ಮಾತ್ರ ಬೆಳೆಯುತ್ತಾಳವಳು. ಹೈನುಗಾರಿಕೆ ಅವಳ ಕೈ ಹಿಡಿದಿದೆ. ಡೈರಿಯಲ್ಲಿ ಅತಿ ಹೆಚ್ಚಿನ ಲೀಟರ್ ಹಾಲು ಬೀಳುವುದು ಗೌರಿ ಹಟ್ಟಿಯಿಂದಲೇ. ಹೈನುಗಾರಿಕೆಗೆ ಸಂಬಂಧಿಸಿದಂತೆ ನಾಲ್ಕಾರು ಪುಸ್ತಕಗಳು ಅವಳ ಹಟ್ಟಿಯಲ್ಲಿ ಬಂದು ಕೂತಿವೆ. ಮೀಸೆಮಿಂಡಾಳುಗಳು ಇಲ್ಲದಾಗಲೂ ಹಟ್ಟಿ ಅಚ್ಚುಕಟ್ಟಾಗಿಯೇ ನಡೆಯುತ್ತಿರುವುದ ಕಂಡು ಪಾರೋತವ್ವ ದಂಗಾಗಿದ್ದಾಳೆ. ಆದರೂ ಮೃತ್ಯು, ಮೃತ್ಯುವಿನ ಹೆಂಡತಿಯಾಗಿ ತನ್ನ ಮಗಳು... ಪ್ರಶ್ನೆಗಳೂ ಹಾಗೇ ಉಳಿದುಕೊಂಡಿವೆ. ಮಗಳಿಗೆ ಕಾಣದಂತೆ ಅವಳು ಕಣ್ಣೀರು ಮಿಡಿಯುವುದು ನಿರಂತರವಾಗಿಯೇ ಇದೆ. ಯಾಕಾಗಿ ಮೃತ್ಯೂ ಹೀಗೆ ಕಣ್ಮರೆಯಾಗಿ ಹೋಗಿಬಿಟ್ಟನೆಂಬ ನೋವು ಅವಳನ್ನು ನಿತ್ಯವೂ ಕಾಡುವಂಥದ್ದೆ.

★★★

ಹೀಗಿದ್ದ ದಿನಮಾನಗಳಲ್ಲಿಯೇ ಗಾರೆ ಸೀನಣ್ಣ ಬಸ್‌ಸ್ಟಾಂಡಿನಾಗೆ ಮೃತ್ಯೂವನ್ನು ನೋಡಿದ ಸಂಗತಿಯನ್ನು ತಂದಿದ್ದು. ಅದೂ ಅವನ ನಾಲಗೆಯ ತೀಟೆಯೇ ಇರಬಹುದೇ? ದಿಟ್ಟಿಸಿ ನೋಡಿದ್ದಳು ಪಾರೋತವ್ವ. ''ನನ್ನ ಕಣ್ ಆಣೆಗೂ ದಿಟ ಕಣವ್ವಾ. ಅವನೇ ಹೋಟ್ಲಿಗೆ ಕರ್ಕಂಡ್ಹೋಗಿ ಉಣ್ಣಿಸಿದ್ನಾ, ಕುಡಿಸಿದ್ನಾ? ಎಲ್ಲಿ ಮನೆ ಮಾಡಿದ್ದೀಯಣ್ಣೋ ಅಂದ ತಕ್ಷಣ ಆಟೋ ಹಿಡ್ಕಂಡು ಕಂಡ್ರೂ ಕಾಣಲಿಲ್ಲ ಅನ್ನಂಗೆ ಹೊಂಟುಬಿಟ್ಟ." ಪಾರೋತವ್ವ ಇರಬಹುದೆಂದು ನಂಬಿದಳು. ಬದುಕಿನಾಗೆ ನಂಬಿಕೆ ಬಹಳ ದೊಡ್ಡದಲ್ಲವೆ?

ಅಲ್ಲಿಂದಾಚೆಗೆ ಗಾರೆಸೀನಣ್ಣ ಪಾರೋತಕ್ಕನಿಗೆ ಮೃತ್ಯೂವಿನ ಸುದ್ದಿಯ ತರುವ ವಕ್ತಾರನಾಗಿಬಿಟ್ಟಿದ್ದ. ಅವನಿಂದಲೇ ಮೃತ್ಯೂ ಕುರಿತಾದ ವಿಷಯಗಳು ತಿಳಿಯತೊಡಗಿದ್ದವು. ಅದರಲ್ಲಿ ಬಹಳ ಮುಖ್ಯವಾದ್ದು ಮೃತ್ಯೂ ಇನ್ನೊಂದು ಹೆಂಗಸನ್ನು ಇಟ್ಟುಕೊಂಡು ಬದುಕು ಸಾಗಿಸುತ್ತಿದ್ದಾನೆಂಬುದು. ಪಾರೋತವ್ವ ಸಿಡಿದು ಬಿದ್ದಿದ್ದಳು. ''ನಾ ಸಾಕಿದ್ ಮಗಾ ಮೃತ್ಯೂ. ನಿನ್ ನಾಲ್ಗೆ ಏನ್ ಎಕ್ಕಡವಾ ಸೀನ. ಮೃತ್ಯೂ ಬಗೆ ಇಂಥ ಮಾತಾ ಆಡಾದು'' ರಾಂಗಾಗಿ ಸೀರೆ ವದರಿಕೊಂಡು ಎದ್ದುಬಿಟ್ಟಿದ್ದಳು. ''ಅವ್ವಾ ನಂಗೆ ಕಂಡ ಸತ್ಯವಾ ಹೇಳೀವ್ನಿ. ನಂಬಿದ್ರ ನಂಬವ್ವಾ ಬುಟ್ರೆ ಬುಡವ್ವಾ" ಆತನೂ ಕೋಪಗೊಂಡು ಎದ್ದು ಹೋಗಿದ್ದ. ಪಾರೋತಕ್ಕನ ತಲೆ ಕುಲಗೆಟ್ಟು

